ಇದ್ದ ಒಂದೂಕಾಲೆಕ್ರೆಗೆ ಮೂಲಂಗಿ ಬೆಳೆದು ಸಂತೋಷಪುರದ ಸಂತೆಗೆ ಮಾರೋ ಕಾಯ್ಕ ಮಾಡಿಕೊಂಡಿದ್ದ. ಹಂಗ್ ಮೂಲಂಗಿ ತಂದು ಸಂತೆಲಿ ಮಾರೋವಾಗಲೇ ನಲ್ಲೂರಿನ ಕೀರಲು ದನಿಯ ಸಾಬರಜ್ಜನತ್ರ ಕಡ್ಲೆ ಕೊಳ್ಳೋ ಹೈಸ್ಕೂಲ್ ಓದೋ ನಾಗವೇಣಿನ ನೋಡಿದ್ದು, ಮನಸಿಟ್ಟಿದ್ದು! ಮನಸಿಟ್ಟ; ಜೊತೆಗೆ ಕುಲ ಗೋತ್ರ, ಊರು, ಕೇರಿ, ಓದೋ ಶಾಲೆ ಎಲ್ಲಾ ವಿಚಾರಿಸಿ ತಮ್ಮ ಜನ ಅಂತ ಗುರುತು ಮಾಡಿಟ್ಟುಕೊಂಡ. ಸ್ವಲ್ಪದಿನ ಬಿಟ್ಟು ಅವ್ವನೆದುರು ಇಚಾರ ಇಟ್ಟ! ನೋಡನ ಬಿಡಪ, ಅಲ್ಲೇ ನಮ್ಮ ಯಕ್ಕನಳ್ಳಿ ರಂಗಪ್ಪನ್ ಮಗ ಮೇಷ್ಟ್ರಾಗಿದಾನೆ ಹೇಳಿದ್ರೆ ವಿಚಾರಿಸ್ತಾನೆ. ಈ ಸಾರಿ ಮೂಲಂಗಿ ಜೊತೆ ಒಂದಿಷ್ಟು ಅವರೆ, ಅಲಸಂದೆನೂ ಹಾಕು. ಒಂದೇ ನೆಚ್ಚಂಡ್ರೆ ಕಾಸು ಕೂಡಲ್ಲ, ಲಗ್ನನೂ ಪರಿಪಾಟ್ಲಾಗ್ತದೆ ಅಂದಾಗ ಒಂದೆರಡು ವರ್ಷ ಪಕ್ಕದ ತಿಮ್ಮಣ್ಣನ ಹೊಲ ಮಿಟ್ಟಾ ಹಿಡಿದು ಒಳ್ಳೆಯ ಬೆಳೆ ತೆಗೆದು ದುಡ್ಡು ಮಾಡಿಕೊಂಡ.

ನಾಗವೇಣಿನ ಕೆಂಚೀರ ಬಲು ಹಚ್ಚಿಕೊಂಡಿದ್ದ. ಹಂಗೋ ಹಿಂಗೋ ಆ ಮೇಷ್ಟ್ರನ್ನ ಹಿಡಿದು ಸಂಬಂಧ ಕುದುರಿಸಿಯೇ ಬಿಟ್ಟ. ಮೊದಲ ಪಿ.ಯು.ಸಿ ದಾಟದ ನಾಗವೇಣಿಗೆ ಕಾಲೇಜು ಸಾಕಾಗಿತ್ತು. ಅದಕ್ಕೆ ಮೊಬೈಲ್ ಕಾರಣ ಅಂತ ಅವಳಪ್ಪನ ಮುನಿಸು! ಆದರೆ, ಮದುವೆಗೆ ಅವಳು ಸುತರಾಂ ಒಪ್ಪಿರಲಿಲ್ಲ. ಆ ಊರಿಗೆ ಬಸ್ಸಿಲ್ಲ ಅಂತ! ಗಾಡಿ ಇದ್ರೆ ನಾಡೇ ಸುತ್ತಬಹುದು. ಬಸ್ ಯಾಕಂತ ಮಧ್ಯ ಇದ್ದವರು ಹೇಳಿದಾಗ ಒಲ್ಲದ ಮನಸಿನಿಂದ ಒಪ್ಪಿ ಕೆಂಚೀರಪ್ಪನನ್ನು ವರಿಸಿ ಚಿನ್ನಾಪುರ ಸೇರಿದ್ದಳು. ಹಸೆ ಮಣೆಲಿ ಎಲ್ರೂ ಸೀರೆ ನೆರಿಗೆ ಜೋಪಾನ ಮಾಡ್ಕಂಡ್ರೆ ನಾಗವೇಣಿ ಮೊಬೈಲ್ ಬಿಗಿಯಾಗಿ ಹಿಡಿದಿದ್ಲು! ಕೆಂಚೀರಪ್ಪನಿಗೆ ಹೊಲದೆಲ್ಲಾ ಫಸಲು ಮೈದುಂಬಿ ಬಂದು ಬಂಗಾರದ ಬೆಲೆ ತಂದಷ್ಟೇ ಕುಸಿಯಾಗಿತ್ತು. ಮದುವೆಯಾದ ಹೊಸತು. ಎಲ್ಲವೂ ಚೆಂದ. ಕೆಂಚೀರಪ್ಪ ನಾಗವೇಣಿನ ಒಂದರಗಳಿಗೆ ಬಿಡದೇ ಕಳ್ಳಿಸಾಲ್ ಬೇಲಿ ಸಾಲ್ ಕಾಯೋ ಹಸಿರ್ಹಾವ್‌ನಂಗೆ ಅವಳ ಸುತ್ತ ಸುತ್ತುತ್ತಿದ್ದ. ಅವರವ್ವನೇ... 'ಯಪ್ಪ ಹೆಂಡ್ರು ಎಲ್ಲೂ ಹೋಗಲ್ಲ, ಹೊಲ, ಕಣ, ದನ–ಕರ, ಮೇವು ಮರೆತ್ರೆ ಹೆಂಗಪ್ಪ... ನಿಮ್ಮಪ್ಪ ಇದ್ದಿದ್ರೆ ಹೆಂಗೋ ಆಗದು. ನೀ ಒಬ್ನೆಯ ಎಲ್ಲ ನೋಡ್ಕಬೇಕು. ಬೇಕಾರೆ ಅಲ್ಲೇ ಹೊಲತಾವ ತೆರೆದ ಬಾವಿ ಐತೆ. ಮೋಟಾರು ಇಳೇ ಬಿಟ್ಟಿದ್ದೀಯ. ಅದರ ಮಗ್ಗಾಗೇ ಒಂದು ಸಣ್ಣ ಗುಡ್ಲು ಹಾಕ್ಕಂಡ್ ಇಬ್ರೂ ಸಂಜೆ ತಂಕ ಇದ್ದು ಬಂದ್ರಾತು, ಕೇಳು ನಿನ್ ಹೆಂಡ್ರನ್ನ' ಅಂದು ಸೆರಗಿಂದ ಕಣ್ಣೊರೆಸಿಕೊಂಡಿತು ಅಜ್ಜಿ!

ಸರಿ ಅನ್ನಿಸಿ ರಾತ್ರಿ ತೆಕ್ಕೆಗ್ ಹಾಕ್ಕಂಡ್ ನಾಗವೇಣಿನ ಕೇಳಿದ. ಅವಳು ಊರಿಂದಲೇ ತಂದಿದ್ದ ಟಚ್ ಸ್ಕ್ರೀನ್ ಸೆಲ್ಲೊಳಗೆ ಏನೇನೋ ಕುಟ್ತಾ ಇದ್ಲು. ಅದೇನ್ ಬಾಯಿಬಿಟ್ಟು ಹೇಳಬಾರದಾ ಅಂತ ಸೊಂಟದಿಂದ ಬೆರಳು ಎದೆ ಕಡೆ ಹೋದಾಗ ಬೆರಳು ಮುರಿದು, 'ಮೂಲಂಗಿ ವಾಸ್ನೆಯೋನೆ... ಸರ್ಕ... ಬೇಕಾರೆ ನೀನು, ನಿಮ್ಮವ್ವ ಹೊಲ್ದಾಗೆ ಬಿದ್ ಸಾಯ್ರಿ, ನಾ ಮಾತ್ರ ಎಲ್ಲೂ ಬರಲ್ಲ' ಅಂದವಳೇ ಕೊಟ್ಟಿಗೆ ಕಡೆ ಹೋಗಿ ಬಾಗಿಲೆಳೆದುಕೊಂಡುಬಿಟ್ಟಳು. ಸಿಟಿಯಂತಹ ಊರಾಗ್ ಇದ್ದವಳಲ್ವೇ, ಬಿಡು ನನ್ನ ಗೋಳು ಅವಳಿಗ್ಯಾಕೆ? ಹೆಂಗೂ ಸಂಜೆ ಒತ್ನಾಗೆ ಬತ್ತೀನಲ್ಲ... ಇಡೀ ರಾತ್ರಿ ನಮ್ದೆ ಅಂತ ಒಬ್ನೆ ಮಲಗಿಬಿಟ್ಟ!

ಮೊಬೈಲ್ ಈಟೊತ್ತಿಗೆ ಹುಡುಕ್ತಾ ಇರ್ತಾಳೆ. ಅವಳ ಜೀವ ಅದು. ನಂಗೇ ಅಂತ ಮೊಬೈಲ್ ಬೇಕಿರಲಿಲ್ಲ. ಯಾಕೋ ಅವಳಪ್ಪನಿಗೆ ಹೇಳಿ ಸಾವಿರದ ನೂರೈವತ್ ರೂಪಾಯಿಗೆ ಸಣ್ ಮೊಬೈಲು ಕೊಡಿಸಿದಾಗ ಬಲು ಆನಂದಾಗಿತ್ತು! ಉಣ್ಣಕ್ಕೆ, ಮನಿಗೆ ಬರಾಕ್ಕೆ, ಯಾವಾಗ್ ಬರ್ತಿ ಅಂತ ದಿನಕ್ ಐದಾರ್ ಸಾರಿ ಕೇಳಿದ್ ಬಲು ಪಿರೀತಿ ಅಂದ್ಕಂಡ ಕೆಂಚೀರಪ್ಪ ಇದೀಗ ಜಿಗುಪ್ಸೆಗೊಂಡಿದ್ದ! ಹೊಲ ಇರೋದೇ ಊರಿಂದ ಒಂದುವರೆ ಮೈಲಿ ದೂರ. ನಡೆದರೆ ದೂರವೇ. ಸೈಕಲ್ ಹತ್ತಿದರೆ ಹತ್ತು ನಿಮಿಷದ ದಾರಿ. ಒಂದೇ ಉಸಿರಿಗೆ ಸಂತೋಷಪುರಕ್ಕೆ ಹೋಗಿ ಹಂಗೇ ತಿರುಗಿ ಬಂದದ್ಕೆ ಎದೆ ಉರಿ

